**ಅಸಲು ದಾವಾ ನಂಃ 19/2015**
**ಡಿ.ಡಬ್ಲ್ಯೂಃ1 , ಶರಬಣ್ಣಾ**

ದಿನಾಂಕ :17-02-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟಿ ಸವಾಲು :- ಶ್ರೀ ಜಿ.ಎಸ್. ಜಿ. ವಕೀಲರಿಂದ :

ಸರ್ವೆ ನಂ: 111/1 , 5 ಎಕರೆ 28 ಗುಂಟೆ ಇದು ಮೊದಲು ನನ್ನ ತಮ್ಮನ ಮಗಳ ಹೆಸರಿನಲ್ಲಿ ಇತ್ತು ಆ ನಂತರ ನನ್ನ ಹೆಸರಿಗೆ ಅದಲಿ ಬದಲಿ ಮಾಡಿಕೊಂಡಿರುತ್ತೇವೆ. ನನ್ನ ಹೆಸರಿಗೆ ಇದ್ದ ಕೆಲವು ಸ್ವತ್ತನ್ನು ಅವರಿಗೆ ಬಿಟ್ಟು ಕೊಟ್ಟಿದ್ದು ಅದರ ಬದಲಾಗಿ ಅವರು ತಮ್ಮ ಹೆಸರಿಗಿ ಇದ್ದ ಸ್ವತ್ತನ್ನು ನನಗೆ ಬಿಟ್ಟುಕೊಟ್ಟಿರುತ್ತಾರೆ. ಸ.ನಂ: 111/3, 6 ಎಕರೆ 32 ಗುಂಟೆ , ಇದನ್ನು ಸಹ ಅದಲ ಬದಲಿ ಮಾಡಿಕೊಂಡಿರುತ್ತೇವೆ. ಈ ಎರಡೂ ಸ್ವತ್ತು ನಾನು ಹಣ ಕೊಟ್ಟು ಖರಿದಿ ಮಾಡಿದ್ದು ಅಲ್ಲಾ ಅವರಿಂದ ಎಕ್ಸಚೇಂಜ್ ಮಾಡಿಕೊಂಡ ಸ್ವತ್ತು ಎಂದು ಸೂಚಿಸುವುದು ಸರಿ. ಸ.ನಂ: 118 ಇದು 1975 ರಲ್ಲಿ ಶಾಂತಮಲ್ಲಪ್ಪ ಇವರ ಹೆಸರಿಗೆ ಖರಿದಿ ಮಾಡಿರುತ್ತೇವೆ. ಸದರಿ ಸ್ವತ್ತು ನಾವು 2009 ರಲ್ಲಿ ಪಾಲು ಮಾಡಿಕೊಳ್ಳುವ ಮೊದಲು ಖರಿದಿ ಆಗಿತ್ತು ಎಂದರೆ ಸಾಕ್ಷಿ ನಾವು ಒಟ್ಟಿಗೆ ಯಾವುತ್ತು ಇಲ್ಲಾ ಎಂದು ಹೇಳಿ 1976 ರಲ್ಲಿ ಖರಿದಿ ಆಯಿತು ಎಂದು ಹೇಳುತ್ತಾರೆ. ಕುಸನೂರಲ್ಲಿ ಮನೆಯನ್ನು 2010 ರಲ್ಲಿ ಖರಿದಿ ಮಾಡಿದ್ದೆ, ಜೈಯನಗರದ ಪ್ಲಾಟನ್ನು 1986 ರಲ್ಲಿ ಖರಿದಿ ಮಾಡಿದ್ದೆ. 1986 ರಲ್ಲಿ ನನಗೆ ಸಾಕ್ಷಷ್ಟು ಹಣ ಇತ್ತು ಎಂದು ಅದರಿಂದ ಇದನ್ನು ಖರಿದಿ ಮಾಡಿದ್ದೆ ಎಂದು ತೋರಿಸಲು ಬ್ಯಾಂಕ ಪಾಸಬುಕ ದಾಖಲೆ ಹಾಕಿದ್ದೀರಾ ಎಂದು ಕೆಳಲಾಗಿ ಸಾಕ್ಷಿ ಹಾಕಿಲ್ಲಾ ಆದರೆ ಸ್ವಂತ ಹಣದಿಂದ ಖರಿದಿ ಮಾಡಿದ್ದೇನೆ ಎಂದು ಹೇಳುತ್ತಾರೆ. ಆ ಸಮಯದಲ್ಲಿ ನಾನು ಆರ್ಥಿಕವಾಗಿ ಸೃದೃಡ ಆಗಿದ್ದೆ ಎಂದು ತೋರಿಸಲು ದಾಖಲೆಗಳನ್ನು ಹಾಕಿಲ್ಲಾ ಕೇವಲ ಆದಾಯ ತೆರಿಗೆ ದಾಖಲೆ ಹಾಕಿದ್ದೇನೆ ಎಂದು ಹೇಳುತ್ತಾರೆ. ಜಯನಗರದಲ್ಲಿ ಮನೆಯನ್ನು 1990 ರಲ್ಲಿ ಕಟ್ಟಿರುತ್ತೇನೆ. ಆ ಸಮಯದಲ್ಲಿ ನಾನುಇನ್ನು ನೌಕರಿಯಲ್ಲಿ ಇದ್ದೆ, 2004 ರಲ್ಲಿ ನಿವೃತ್ತಿ ಆಗಿದ್ದೇನೆ ಎಂದು ಹೇಳುತ್ತಾರೆ. 1990 ರಲ್ಲಿ ಮನೆ ಕಟ್ಟಲು ಸುಮಾರು 25 ರಿಂದ 30 ಲಕ್ಷ ಖರ್ಚಾಗಿರುಬಹುದು ಎಂದರೆ ಸಾಕ್ಷಿ ಇಲ್ಲಾ ರೂ. 1 ಲಕ್ಷ ಖರ್ಚನಲ್ಲಿ ಕಟ್ಟಿದ್ದೇನೆ ಎಂದು ಹೇಳುತ್ತಾರೆ.

ಸದರಿ ಮನೆ ಕಟ್ಟಲು ಪಡೆದ ಅಪ್ರೂಡ್ ಪ್ಲಾನ್, ಎಸ್ಟೇಮೇಶನ್ , ದಾಖಲೆ ಯಾವುದು ಇಲ್ಲಾ ಎಂದು ಹೇಳಿ ಸಾಕ್ಷಿ ನಂತರ ಮುಂದುವರೆದು ಎಸ್ಟಮೇಶನ ದಾಖಲೆ ಯಾವುದು ಇಲ್ಲಾ ಎಂದು ಹೇಳುತ್ತಾರೆ. ಮನೆ ಕಟ್ಟಲು ನಾನು ಯುನಿವರ್ಸಿಟಿ ಇಂದ ಸಾಲ ಪಡೆದಿದ್ದೆ. ಸದರಿ ಸಾಲ ಮಂಜೂ ರಮಾಡುವ ಮೊದಲು ಎಸ್ಟಿಮೇಶನ ಅಪ್ರೂಡ ಪ್ಲಾನ ಎಲ್ಲಾ ಕೊಟ್ಟ ನಂತರ ಸಾಲ ಮಂಜೂರು ಆಗುತ್ತದೆ ಎಮದು ಹೇಳುವುದು ಸರಿ. ನಾನು ಈ ರೀತಿಯಾಗಿ ಸಾಲ ಪಡೆದ

ಬಗ್ಗೆ ಆ ದಾಖಲೆಗಳನ್ನು ಈ ನ್ಯಾಯಾಲದಲ್ಲಿ ಹಾಜರು ಪಡಿಸಿಲ್ಲಾ ಎಂದರೆ ಸಾಕ್ಷಿ ಹಾಕಿದ್ದೇನೆ ಎಂದು ಹೇಳುತ್ತಾರೆ. 1990 ರಲ್ಲಿ ನನ್ನ ಆರ್ಥಿಕ ಸ್ಥಿತಿ ಅಷ್ಟೊಂದು ಸೃದೃಡ ವಾಗಿ ಇರಲಿಲ್ಲಾ, ನಾನು ಒಟ್ಟು ಕುಟಂಬದ ಆದಾಯದಿಂದ ಜಯನಗರದಲ್ಲಿ ಮನೆ ಕಟ್ಟಿದ್ದೆನೆ ಮತ್ತು ಸಾಲ ಪಡಿದಿದ್ದೆ ಎಂದು ಸುಳ್ಳು ಹೇಳಿದ್ಧೇನೆ ಎಂದರೆ ಸರಿಯಲ್ಲ.

2010 ರಲ್ಲಿ ಕಟ್ಟಿದ ಮನೆಯನ್ನು ಖರಿದಿ ಮಾಡುವಾಗ ಸಾಲ ಪಡೆದಿಲ್ಲಾ, ನನ್ನ ಪೆನಶನ ಹಣದಿಂದಖರಿದಿ ಮಾಡಿದ್ದೇನೆ ಎಂದು ಹೇಳುತ್ತಾರೆ. 2010 ರಲ್ಲಿ ನನಗೆ ಪೆನಶನ ದಿಂದ ಬಂದ ಹಣ ಎಷ್ಟು ಇತ್ತು ಎಂದು ತೋರಿಸಲು ಬ್ಯಾಂಕ ದಾಖಲೆ ಹಾಕಿದ್ದಿರಾ ಎಂದು ಕೇಳಲಾಗಿ ಸಾಕ್ಷಿ ಯಾವುದು ಹಾಕಿದ ಬಗ್ಗೆ ನೆನಪಿಲ್ಲಾ ಎಂದು ಹೇಳುತ್ತಾರೆ. ನಾನು ಶಾಂತಮಲ್ಲಪ್ಪ ವಾಟಣಿ ಮಾಡಿಕೊಂಡಿದ್ದು 2009 ರಲ್ಲಿ ಎಂದು ಹೇಳುತ್ತಾರೆ. 2009-10 ರಲ್ಲಿ ವಾಟಣಿ ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಭೀಮಾಶಂಕರ, ಶಾಂತಮಲ್ಲಪ ವಾಟಣಿ ಮಾಡಿಕೊಂಡ ನಂತರ ನಮ್ಮ ನಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಕೋೀಂಡಿರಾ ಎಂದು ಕೇಳಾಲಾಗಿ ಸಾಕ್ಷಿ ಒಂದು ವರ್ಷದ ನಂತರ ಮಾಡಿಕೊಂಡಿದ್ದೇವೆ ಎಂದು ಹೇಳುತ್ತಾರೆ. ಶಾಂತಮಲ್ಲಪ್ಪ ಮತ್ತು ಭೀಮಾಶಂಕರ ರವರು ಈ ಖಾತೆ ಬದಲಾವಣೆ ಮಾಡಿಕೊಂಡಿದ್ದು ತಪ್ಪು ಇದೆ ಎಂದು ನನ್ನ ವಿರದ್ಧ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿಲ್ಲಾ . ನಾವು 3 ಜನ ವಾಟಣಿ ಮಾಡಿಕೊಂಡು ನಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಂಡ ನಂತರ ನಮ್ಮ ಕುಟುಂಬದ ಸದಸ್ಯರು ಇಲ್ಲಿಯವರೆಗೂ ಅದನ್ನು ಯಾರು ಪ್ರಶ್ನೆ ಮಾಡಿಲ್ಲಾ.

1990 ರಲ್ಲಿ ಮನೆ ಕಟ್ಟಿದ ಬಗ್ಗೆ ಯನಿರ್ವಸಿಟಿ ಇಂದ ಸಾಲ ಪಡೆದ ಬಗ್ಗೆ ನಾನು ಯುನಿವರ್ಸಿಟಿ ಮುಖ್ಯಸ್ಥರಿಗೆ ತಿಳಿಸಿರುತ್ತೇನೆ. ನಾನು ಯುನಿರ್ವಸಿಟಿಯಲ್ಲಿ ಕೆಲಸಕ್ಕೆ ನೇಮಕವಾದ ದಿನದಿಂದ ನಿವೃತಿ ಹೊಂದೂವರೆಗೂ ಸೇವಾ ಪುಸ್ತಕ ನೊಂದಣಿ ಮಾಡಿರುತ್ತಾರೆ ಎಂದರೆ ಸರಿ. ಸೇವಾ ಪುಸ್ತಕ ದಲ್ಲಿ ಸೇವಾ ಆವಧಿಯಲ್ಲಿ ಸಾಲ ಮಾಡಿದ ಬಗ್ಗೆ ಆಸ್ತಿ, ಖರಿದಿ ಮಾಡಿದ ಬಗ್ಗೆ ಎಲ್ಲಾ ವಿವರಣೆ ಸಿಗುತ್ತದೆ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ನಮಗೆ ಕರ್ನಾಟಕ ಸರ್ಕಾರ ಯಿನಿರ್ವಸಿಟಿ ರೂಲ್ಸ ಅನ್ವಯ ಆಗುವುದಿಲ್ಲಾ. ಯುಜಿಸಿ ರೂಲ್ಸ ಅನ್ವಯ ಆಗುತ್ತದೆ ಎಂದು ಹೇಳುತ್ತಾರೆ. ಅದರ ಜೊತೆ ಗೆ ಯುನಿರ್ವಸಿಟಿ ಎಂಪ್ಲಾಯಿಜ್ ಕಂಡಟಕ್ ರೂಲ್ಸ ಸಹ ಅನ್ವಯ ಆಗುತ್ತೆದೆ ಎಂದರೆ ಅದು ಆಡಳಿತ ವಿಚಾರ ನನಗೆ ಗೊತ್ತಿಲ್ಲಾ ಎಂದು ಹೇಳುತ್ತಾರೆ. ಈ ದಾವೆಯಲ್ಲಿ ಹೇಳಿರುವ ಜಮೀನು ಪ್ಲಾಟು, ಮನೆ ಎಲ್ಲವೂ ಕೂಡಾ ನನ್ನ , ಕವಿರಾಜ, ರವಿರಾಜ ಮೂರು ಜನರ ಒಟ್ಟು ಕುಟುಂಬದ ಸ್ವತ್ತು ಎಂದರೆ ಸಾಕ್ಷಿ ಅದು ಎಲ್ಲಾ ನಾನು ಖರಿದಿ ಮಾಡಿದ ಸ್ವತ್ತುಗಳು ಎಂದು ಹೇಳುತ್ತಾರೆ. ನಾನು ಶಾಂತಮಲ್ಲಪ ಮತ್ತು ಡಾ: ಭೀಮಾಶಂಕರ ವಿಬಾಗ ಮಾಡಿಕೊಂಡ ನಂತರ ನನ್ನ

**ಅಸಲು ದಾವಾ ನಂಃ 19/2015**
**ಡಿ.ಡಬ್ಲ್ಯೂಃ1 , ಶರಬಣ್ಣಾ**

ಪಾಲಿಗೆ ಬಂದ ಸ್ವತ್ತುಗಳನ್ನು ನಾನು ಇದುವರೆಗೂ ರವಿರಾಜ, ಕವಿರಾಜ ಯಾರಿಗೂ ಭಾಗ ಮಾಡಿಕೊಟ್ಟಿಲ್ಲಾ ಎನ್ನವುದು ಸರಿ. ನನ್ನ ಪಾಲಿಗೆ ಬಂದ 32 ಎಕರೆ 11 ಗುಂಟೆ ಜಮೀನು ಇವತ್ತಿಗೂ ನನ್ನ ಹಿಡಿತದಲ್ಲಿ ಉಸ್ತುವಾರಿಯಲ್ಲಿ ಇದೆ ಎಂದರೆ ಸಾಕ್ಷಿ ನಾನೇ ನೋಡಿಕೊಳ್ಳುತ್ತಿದ್ದೇನೆ ಎಂದು ಹೇಳುತ್ತಾರೆ. ವಾದಿಯರಿಗೆ ದಾವೆಯ ಸ್ವತ್ತುಗಳಲ್ಲಿ ಪಾಲು ಕೊಡಬಾರದು ಎಂದು ಕೆಲವೊಂದು ಆಸ್ತಿ ಸ್ವಂತ ಅಸ್ತಿ, ಕೆಲವೊಂದು ಖರಿದಿ ಮಾಡಿದ್ದು ಎಂದು ನಾನು ಸುಳ್ಳು ಹೇಳಿದ್ದೆನೆ ಎಂದರೆ ಸರಿಯಲ್ಲ\. ಅದು ಆಧಾರ ರಹಿತ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ಕಾನೂನು ಪ್ರಕಾರ ಭಾಗ ಆಗಿ ಹಿಸ್ಸ ಕೊಡವುವರೆಗೂ ವಾದಿಯರಿಗೆ ಅದರಲ್ಲಿ ಬಂದ ಲಾಭದಲ್ಲಿ ಪಾಲು ಕೊಡಲು ಜೀವನಾಂಶ ಕೊಡಲು ಕಾನೂನು ಪ್ರಕಾರ ನಾನು ಭಾಧ್ಯಸ್ಥ ಎಂದರೆ ಸಾಕ್ಷಿ ಜೀವನಾಂಶ ವನ್ನು 2014 ರಿಂದ ಕೊಡುತ್ತಿದ್ದೇನೆ ಎಂದು ಹೇಳುತ್ತಾರೆ.

ಸೌಮ್ಯ ರವಿರಾಜ ಇವರು ನನ್ನ ಇನ್ನೊಬ್ಬ ಮೊಮ್ಮಗಳು ಎಂದರೆ ಸರಿ. ಅವರು ಧಾರವಾಡದಲ್ಲಿ ಇಂಜನಿಯರಿಂಗ ಓದುತ್ತಿದ್ದಾರೆ. ನಾನು ಇತ್ತೀಚಿಗೆ ಬೆಂಗಳೂರಿನಲ್ಲಿ ಅವರ ಹೆಸರಿನಲ್ಲಿ ಮನೆ ಖರಿದಿ ಮಾಡಿದ್ದೇನೆ ಎಂದರೆ ಸಾಕ್ಷಿ ಅದು ಅವರಿಗೆ ಬಿಟ್ಟ ವಿಚಾರ ಅದು ನನಗೆ ಗೊತ್ತಿಲ್ಲಾ ಎಂದು ಹೇಳುತ್ತಾರೆ. ಅದು ಯಾವ ಏರಿಯಾದಲ್ಲಿ ಇದೆ ಎಂದು ನನಗೆ ಗೊತ್ತಿಲ್ಲಾ. ಅದನ್ನು ಸಹ ನಾನು ಒಟ್ಟು ಕುಟುಂಬದ ಆದಾಯದಿಂದ ಸೌಮ್ಯ ಇವರ ಹೆಸರಿಗೆ ಖರಿದಿ ಮಾಡಿದ್ದೇನೆ ಎಂದರೆ ಸಾಕ್ಷಿ ಇಲ್ಲಾ ಎಂದು ಹೇಳುತ್ತಾರೆ. ಅವರು ಸಾಲ ಪಡೆದಿದ್ದಾರೆ ಎಂದು ಹೇಳಿದ್ದು ಆ ಬಗ್ಗೆ ಕಾಗದ ಹಾಕಲು ಸಾಧ್ಯವೇ ಎಂದು ಕೇಳಿದಕ್ಕೆ ಅದು ನನ್ನ ಬಳಿ ಇಲ್ಲಾ ಎಂದು ಹೇಳುತ್ತಾರೆ.

ಮರು ವಿಚಾರಣೆ : ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ.